ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 14-12-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **Standing Fire Advisory Council** ನ 37 ನೇ ಸಮ್ಮೇಳನದ ಉದ್ಘಾಟನೆ: ನಾಗರೀಕ ಸೇವೆಗಳ ನಿರ್ದೇಶನಾಲಯ<br><br>ಉದ್ಘಾಟನೆ:<br><br>ಡಾ. ಜಿ. ಪರಮೇಶ್ವರ್,<br>ಗೃಹ ಸಚಿವರು.<br><br>ಸೂಚನೆ:– ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ಭಗವಾನ್ ಮಹಾವೀರ ರಸ್ತೆಯಲ್ಲಿರುವ ವಾರ್ತಾಸೌಧದಿಂದ ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 8.30 ಗಂಟೆಗೆ ಹೊರಡಲಿದೆ.<br><br>ಸಂಪರ್ಕ;<br><br>ವೀರಭದ್ರಯ್ಯ,<br>ಅಗ್ನಿಶಾಮಕ ಅಧಿಕಾರಿ,<br>ಮೊ. ಸಂಖ್ಯೆ 9740245352 | 15-12-2015<br>ಮಂಗಳವಾರ<br>ಬೆಳಿಗ್ಗೆ<br>10-00 ಗಂಟೆಗೆ | ಸಭಾಂಗಣ – 1,<br>ಇನ್‌ಫೋಸಿಸ್ ಟೆಕ್ನಾಲಜಿಸ್ ಕ್ಯಾಂಪಸ್, ಎಲೆಕ್ಟ್ರಾನಿಕ್ ಸಿಟಿ,<br>ಬೆಂಗಳೂರು. |
| 2. | ತಜ್ಞರ ಸಮಿತಿ ಸಭೆ: | 15-12-2015<br>ಮಂಗಳವಾರ | ಕೊಠಡಿ ಸಂಖ್ಯೆ 317,<br>ಮೂರನೇ ಮಹಡಿ, |

| | | | |
|---|---|---|---|
| | ಪ್ಯಾರಿಸ್ ಒಪ್ಪಂದದ ಕುರಿತು<br><br>ಅಧ್ಯಕ್ಷತೆ: ಡಿ ಹೆಚ್ ಶಂಕರಮೂರ್ತಿ<br>ಕರ್ನಾಟಕ ವಿಧಾನ ಪರಿಷತ್ ಸಭಾಪತಿಗಳು | ಅಪರಾಹ್ನ<br>12–00 ಗಂಟೆಗೆ | ವಿಕಾಸಸೌಧ, ಬೆಂಗಳೂರು. |
| | | | |

ನಿರ್ದೇಶಕರ ಪರವಾಗಿ

## ಮಾಧ್ಯಮ ಮುಖ್ಯಸ್ಥರ ಗಮನಕ್ಕೆ

ಡಿಸೆಂಬರ್ 27 ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲಿ ಮತಗಟ್ಟೆ ಹಾಗೂ ಮತ ಎಣಿಕೆ ಕೇಂದ್ರಗಳಿಗೆ ಪರವಾನಗಿ ಪತ್ರವನ್ನು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ವಿತರಿಸಲಾಗುವುದು. ಆದ್ದರಿಂದ ತಮ್ಮ ಸಂಸ್ಥೆಯಿಂದ ಚುನಾವಣಾ ವರದಿಗೆ ನಿಯೋಜಿಸುವ ಮಾಧ್ಯಮ ಪ್ರತಿನಿಧಿಗಳ ಹೆಸರು, ಪದನಾಮ ಮೊಬೈಲ್ ಸಂಖ್ಯೆ ಸೇರಿದಂತೆ ಅವರ ಪೂರ್ಣ ಮಾಹಿತಿ ಹಾಗೂ ಅವರ ಇತ್ತೀಚಿನ ಮೂರು ಭಾವಚಿತ್ರಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಗೆ **15–12–2015** ರೊಳಗೆ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ಮನವಿಯನ್ನು ಪರಿಗಣಿಸುವುದಿಲ್ಲ.

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಡಿಸೆಂಬರ್ 22 ರಂದು
## ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ)

ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಡಿಸೆಂಬರ್ 22 ರಂದು ಬೆಳಿಗ್ಗೆ 10-00 ಗಂಟೆಗೆ "ರಾಷ್ಟ್ರೀಯ ಗ್ರಾಹಕರ ದಿನಾಚರಣೆ – 2015" ಅನ್ನು ಬೆಂಗಳೂರಿನ ಕೆಂಪೇಗೌಡ ರಸ್ತೆಯ ಶಿಕ್ಷಕರ ಸದನ (ಕಾವೇರಿ ಭವನ) ಇಲ್ಲಿ ಆಯೋಜಿಸಿದೆ.

ಈ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಿಂದ ಗ್ರಾಹಕರಿಗೆ ಜಾಗೃತಿ ಮೂಡಿಸುವ ಪ್ರಾತ್ಯಕ್ಷಿಕೆ ಮತ್ತು ಗ್ರಾಹಕ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ .

ಪಲ್ಲವಿ:ಬಾಬು:ಜಿಪಿಆರ್

## ಡಿಸೆಂಬರ್ 16 ರಂದು
## ವಿಜಯ ದಿವಸ್ ಆಚರಣೆ

ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ)

1971 ರಲ್ಲಿ ನಡೆದ ಇಂಡೋ-ಪಾಕ್ ಯುದ್ಧದಲ್ಲಿ ಜಯವನ್ನು ತಂದು ಕೊಡಲು ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತಾತ್ಮರ ಸ್ಮರಣೆಯ ಸಂಕೇತವಾಗಿ ಪ್ರತಿ ವರ್ಷದಂತೆ, ಈ ವರ್ಷವೂ ಸಹ ವಿಜಯ ದಿವಸ್ ಆಚರಣೆಯನ್ನು ಡಿಸೆಂಬರ್ 16 ರಂದು ಬೆಳಿಗ್ಗೆ 9-15 ಗಂಟೆಗೆ ನೆಹರೂ ತಾರಾಲಯದ ಎದುರು ಇರುವ ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕದಲ್ಲಿ ಆಚರಿಸಲಾಗುವುದು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.. ಈ ಸಮಾರಂಭದಲ್ಲಿ ಸೇವಾ ನಿರತ/ನಿವೃತ್ತ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು, ಹಿರಿಯ ನಾಗರೀಕ ಸೇವಾ ಅಧಿಕಾರಿಗಳು,. ಎನ್.ಸಿ.ಸಿ. ಕೆಡೆಟ್ ಮತ್ತು ಶಾಲಾ/ಕಾಲೇಜು ಮಕ್ಕಳು ಸಹ ಪಾಲ್ಗೊಳ್ಳಲಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್.

# Observance of Vijay Diwas on 16th December

**Bengaluru December 14, 2015 (Karnataka Information)**

**Vijaya Diwas – 2015 will be observed on 16th December 2015 (Wednesday) at 9-15 AM at National Military Memorial, opp. Nehru Planetarium, Bengaluru - 560 001.**

**Chief Minister will be the Chief Guest and Home Minister G. will be the guest of honour for the function.**

**Other Ministers, Civil and Military Serving Officers, retired Defence Officers, Serving Soldiers, Ex-servicemen and their families, NCC Cadets and school children will be participating in the function.**

**pallavi:babu:gpr.**

# <u>ಅನುದಾನ ರಹಿತ ಶಾಲೆ ಆರಂಭಕ್ಕೆ :</u>
# <u>ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ</u>

ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ)

2016–17 ನೇ ಸಾಲಿನಲ್ಲಿ ಹೊಸದಾಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಸಂಸ್ಥೆಗಳು ಆನ್–ಲೈನ್ ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗಿದ್ದ ಅವಧಿಯನ್ನು ಡಿಸೆಂಬರ್ 20 ರವರೆಗೆ ವಿಸ್ತರಿಸಲಾಗಿದೆ.

ಆನ್–ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿಯನ್ನು ಪ್ರಿಂಟ್ ತೆಗೆದು ಅಗತ್ಯ ದಾಖಲೆಗಳೊಂದಿಗೆ ಡಿಸೆಂಬರ್ 31 ರೊಳಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಸಲ್ಲಿಸುವುದು. ಅರ್ಜಿಯ ಸ್ಥಿತಿಯನ್ನು ಆನ್–ಲೈನ್ ತಂತ್ರಾಂಶದ ಮೂಲಕ ವೀಕ್ಷಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

# <u>Jaipur makes it to UNESCO's Creative City list</u>

**<u>Bangalore, December 14 (Karnataka Informtion)</u>**

**In an announcement made by UNESCO Director-General, Irina Bokova on 11th December 2015, Jaipur has been included as a member of the UNESCO Creative Cities Network in the category of City of Crafts and Folk Arts.**

**Thirty six varieties of crafts were identified in the city including the ones related to Sculpture; Pottery; Textiles and Jewellery. The Creative Cities Network covers seven**

**creative fields: Crafts & Folk Art, Design, Film, Gastronomy, Literature, Music and Media Arts.**

**Jaipur is among 47 cities from 33 countries to join the UNESCO Creative Cities Network in 2015. The other city from India that has made it to this list is Varanasi under the category of City of Music. This is the first time that two Indian cities have made it to the UNESCO's Creative City Network. The Indian Heritage Cities Network Foundation (IHCNF) with the support of the Government of Rajasthan initiated the proposal and prepared the application for Jaipur City to apply for the Creative City status. The application process was steered by Smt Rathi Vinay Jha, Chairperson IHCNF.**

**Launched in 2004 and now comprising 116 Member Cities, the UNESCO Creative Cities Network aims to foster international cooperation with and between cities committed to investing in creativity as a driver for sustainable urban development, social inclusion and cultural vibrancy. The cities which currently make up this network work will together towards a common objective: placing creativity and cultural industries at the heart of their development plans at the local level and cooperating actively at the international level.**

**Following the announcement the Rajasthan Chief Minister, Smt. Vasundhara Raje, in a press release expressed happiness over Jaipur's selection by UNESCO under Creative Cities Network for its art and craft. "It is a moment of great pride for us. By joining the network, Jaipur will get the opportunity to be enriched by the best practices from and partnerships with other cities from across the work in the network. It offers unparalleled opportunity for the State to showcase its folk art and crafts globally," she said. "This will help our artisans to present their creations to a global audience", she added.**

**Pallavi:**

# ‘ಯುನೆಸ್ಕೋ’ ಸೃಜನಾತ್ಮಕ ನಗರಗಳ ಪಟ್ಟಿಗೆ ಜೈಪುರ್ ಸೇರ್ಪಡೆ

**ಬೆಂಗಳೂರು, ಡಿಸೆಂಬರ್ 14 (ಕರ್ನಾಟಕ ವಾರ್ತೆ)**

**ದೇಶದ ‘ಪಿಂಕ್ ಸಿಟಿ’ ಎಂದೇ ಖ್ಯಾತಿ ಪಡೆದ, ರಾಜಸ್ಥಾನದ ರಾಜಧಾನಿ ಜೈಪುರ್, ‘ಯುನೆಸ್ಕೊ’ ದ 47 ಸೃಜನಾತ್ಮಾಕ ನಗರಗಳ ಪಟ್ಟಿಗೆ ಹೊಸ ಸೇರ್ಪಡೆಯಾಗಿದೆ. ಈ ವಿಷಯವನ್ನು ಇತ್ತೀಚೆಗೆ ಸಂಸ್ಥೆಯ ಪ್ರಧಾನ ನಿರ್ದೇಶಕರಾದ ಇರಿನಾ ಬೊಕೊವಾ ಘೋಷಿಸಿದ್ದಾರೆ.**

**ಯುನೆಸ್ಕೊದ ಸೃಜನಾತ್ಮಕ ನಗರಗಳ ಜಾಲದಲ್ಲಿ, ಕರಕುಶಲ ಹಾಗೂ ಜಾನಪದ ಕಲೆ ವಿಭಾಗದಲ್ಲಿ ಜೈಪುರ್ ಸದಸ್ಯತ್ವ ಪಡೆದಿದೆ. ಒಟ್ಟು 36 ವಿವಿಧ ಕರಕುಶಲ ಪ್ರಕಾರಗಳನ್ನು ಜ್ಯಪುರ್‌ದಲ್ಲಿ ಗುರುತಿಸಲಾಗಿದೆ.**

ಇದೇ ಮೊದಲ ಬಾರಿಗೆ ಭಾರತದಿಂದ ನಾಮನಿರ್ದೇಶನ ಕಂಡ ಎರಡು ನಗರಗಳ ಪೈಕಿ ಜೈಪುರ್ ಒಂದು. 'ಸಂಗೀತ ನಗರ' ವಿಭಾಗದಲ್ಲಿ ನಾಮನಿರ್ದೇಶನ ಪಡೆದ ಮತ್ತೊಂದು ನಗರ ವಾರಣಾಸಿ.

ಪಲ್ಲವಿ: